ದಿ: 19-11-2024 ರಂದು ಪುನಃ ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ ಎಸ್ ಹೆಚ್ ವಕೀಲರಿಂದ :

ನಾನು ಬಂಗಾರದ ಕೆಲಸವನ್ನು ಅಕ್ಕಿ ಆಲೂರಿನಲ್ಲಿ ಮಾಡುತ್ತೇನೆ. ನಾನು ಅಂಗಡಿ ಇಟ್ಟುಕೊಂಡು ಅರ್ಕಸಾಲಿಗ ಕೆಲಸ ಮಾಡುತ್ತೇನೆ. ನನ್ನ ಅಂಗಡಿಯ ಹೆಸರು ಶ್ರೀ ಲಕ್ಷ್ಮೀ ಜುವೇಲರ್ಸ ಆಗಿರುತ್ತದೆ. ನನಗೆ ಈ ವ್ಯವಹಾರದದಿಂದ ವರ್ಷಕ್ಕೆ 8 ರಿಂದ 9 ಲಕ್ಷ ಆದಾಯ ಇದೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿಸುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಅಂಗಡಿಯ ಹೆಸರಿನಲ್ಲಿ ಜಿ ಎಸ್ ಟಿ ಯನ್ನು ಪಡೆದುಕೊಂಡಿರುತ್ತೇನೆ. ನಾನು ಗ್ರಾಹಕರಿಗ ತೆರಿಗೆ ಪಾವತಿಸುವ ಸಂದರ್ಭದಲ್ಲಿ ಓರಿಜಿನಲ್ಲಿ ಬಿಲ್ಲನ್ನು ನೀಡುತ್ತೇನೆ. ಗ್ರಾಹಕರು ತೆರಿಗೆಯನ್ನು ಪಾವತಿಸಿದರೆ ಮಾತ್ರ ಓರಿಜಿನಲ್ಲ ಬಿಲ್ಲ ನೀಡುತ್ತೇವೆ ಒಂದು ವೇಳೆ ತೆರಿಗೆ ಪಾವತಿಸದೇ ಇದ್ದ ಸಂದರ್ಭದಲ್ಲಿ ಓರಿಜಿನಲ್ ಬಿಲ್ಲುಗಳನ್ನು ನೀಡಲು ಬರುವುದಿಲ್ಲ. ಗ್ರಾಹಕರು ಹೆಚ್ಚಿನ ಚಿನ್ನ ಬಂಗಾರವನ್ನು ಖರೀದಿಸುವ ಸಂದರ್ಭದಲ್ಲಿ ಮೂಲ ಬಿಲ್ಲನ್ನು ನೀಡುತ್ತೇವೆ ಒಂದು ವೇಳೆ ಹಳೆಯ ಬಂಗಾರವನ್ನು ನೀಡಿದ್ದೇ ಆದಲ್ಲಿ ಈ ಬಗ್ಗೆ ಮೂಲ ಬಿಲ್ಲನ್ನು ನೀಡಲು ಬರುವುದಿಲ್ಲ. ಆರೋಪಿ ನನ್ನ ಬಳಿ ಚಿನ್ನ ಖರೀದಿಸುವಾಗ ಹಳೆ ಬಂಗಾರವನ್ನು ನೀಡಿ ಹೊಸ ಬಂಗಾರವನ್ನು ಪಡೆದುಕೊಂಡು ಆ ಹೊಸ ಬಂಗಾರಕ್ಕೆ ತಗಲುವ ಹಣವನ್ನು ನೀಡಿರುತ್ತಾರೆ. ಈ ವಿಚಾರವನ್ನು ದೂರಿನಲ್ಲಿ ತಿಳಿಸಿರುವುದಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಎಷ್ಟು ಹಣ ನೀಡಿ ಚಿನ್ನ ಪಡೆದರು ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಬದಲಾಗಿ ಆರೋಪಿಗೆ ನೀಡಿರುತ್ತೇವೆ. ಈ ಬಗ್ಗೆ ಕಾರ್ಬನ್ ಪ್ರತಿ ನಮ್ಮ ಬಳಿ ಇಟ್ಟುಕೊಂಡಿರುವುದಿಲ್ಲ. ನಾನು ಆರೋಪಿಗೆ ನೀಡಿದ ಬಿಲ್ಲನಲ್ಲಿ ಅಂಗಡಿಯ ಹೆಸರನ್ನು ನಮೂದಿಸಿರುವುದಿಲ್ಲ ಬದಲಾಗಿ ಬಿಳಿ ಹಾಳೆಯ ಮೇಲೆ ಬರೆದುಕೊಟ್ಟಿರುತ್ತೇನೆ. ಆರೋಪಿ ಶಿರಸಿ ತಾಲೂಕಿನ ಶಂಕವಳ್ಳಿ ಗ್ರಾಮದವರಾಗಿರುತ್ತಾರೆ. ಆರೋಪಿ ತನ್ನ ಎಲ್ಲಾ ವ್ಯವಹಾರಗಳನ್ನು ಶಿರಸಿಯಲ್ಲಿ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ನವೆಂಬರ್ 2021 ರಂದು ಆರೋಪಿಗೆ ಸುಮಾರು 10 ತೊಲೆಯಷ್ಟು ಬಂಗಾರವನ್ನು ಮಾಡಿ ಕೊಟ್ಟಿರುತ್ತೇನೆ.

2. ಆ ಸಂದರ್ಭದಲ್ಲಿ ಪ್ರತಿ ಗ್ರಾಂ ಗೆ ಚಿನ್ನದ ಬೆಲೆ 3700 ಇತ್ತು. ಸುಮಾರು 106 ಗ್ರಾಂದಷ್ಟು ಚಿನ್ನವನ್ನು ಹಾಕಿ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಮಂಗಳಸೂತ್ರ, ಬಳೆ ಮತ್ತು ಉಂಗುರಗಳನ್ನು ಮಾಡಿ ಕೊಡಲಾಗಿತ್ತು. ಅವುಗಳನ್ನು ನಿರ್ದಿಷ್ಟವಾಗಿ ಎಷ್ಟೆಷ್ಟು ಗ್ರಾಂಗೆ ಮಾಡಲಾಗಿತ್ತು ಎಂದು ಈಗ ಹೇಳಲಾಗುವುದಿಲ್ಲ. ಆ ದಿನ ಆರೋಪಿಯ ಜೊತೆ ಆಕೆಯ ಗಂಡ, ಮಗ, ಮಗಳು ಮತ್ತು ಇನ್ನೂ ಕೆಲವು ಜನ ಬಂದಿದ್ದರು. ಮಂಗಳಸೂತ್ರ ಬಳೆ ಮತ್ತು ಉಂಗುರಗಳ ಒಟ್ಟು ಬೆಲೆ ರೂ. 4 ಲಕ್ಷ ಆಗಿತ್ತು. ಈ ಬಗ್ಗೆ 2021 ನೇ ಸಾಲಿನಲ್ಲಿ ಆರೋಪಿ 2 ಲಕ್ಷದ 2 ಸಾವಿರ ಹಣ ಕೊಟ್ಟರು ಆದರೆ ದಿನಾಂಕ ಮತ್ತು ತಿಂಗಳು ಈಗ ನನಗೆ ನೆನಪಿಲ್ಲ. ನನ್ನ ಆದಾಯ ತೆರಿಗೆಯಲ್ಲಿ ಆರೋಪಿಗೆ ಎಷ್ಟು ಚಿನ್ನ ಕೊಡಲಾಗಿತ್ತು ಹಾಗೂ ಬಾಕಿ ಹಣ ಎಷ್ಟು ತರಬೇಕಾಗಿತ್ತು ಎಂಬ ಬಗ್ಗೆ ತೋರಿಸಿರುವುದಿಲ್ಲ. ನಾನು ಬಂಗಾರವನ್ನು ಹುಬ್ಬಳ್ಳಿ ಮತ್ತು ದಾವಣಗೇರಿಯಲ್ಲಿ ಸಂಪೂರ್ಣವಾಗಿ ತೆರಿಗೆ ಮತ್ತು ಹಣ ಪಾವತಿಸಿ ಖರೀದಿಸುತ್ತೇನೆ. ಆ ಬಂಗಾರಕ್ಕೆ ಶೇ. 3 ರಷ್ಟು ಜಿ ಎಸ್ ಟಿ ನೀಡುತ್ತೇವೆ. ಆ ಶೇ 3 ರಷ್ಟು ಜಿ ಎಸ್ ಟಿ ಯನ್ನು ಗ್ರಾಹಕರ ಮೇಲೆ ಹಾಕುತ್ತೇವೆ. ಪ್ರತಿಯೊಬ್ಬ ಗ್ರಾಹಕರಿಗೂ ಸಹ ಶೇ 3 ರಷ್ಟ ಜಿ ಎಸ್ ಟಿ ಯನ್ನು ವಿಧಿಸುತ್ತೇವೆ. ಆರೋಪಿ ನಮ್ಮ ಜೊತೆ ದೊಡ್ಡ ವ್ಯವಹಾರ ಮಾಡಿರುವುದರಿಂದ ಚೀಟಿಯಲ್ಲಿ ಬರೆದುಕೊಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಅವರು ನಮಗೆ ಪರಿಚಯಸ್ಥರಿದ್ದ ಕಾರಣ ಚೀಟಿಯಲ್ಲಿ ಬರೆದುಕೊಟ್ಟಿರುತ್ತೇನೆಂದು ಸ್ವತಃ ನುಡಿಯುತ್ತಾರೆ. ಅವರೊಂದಿಗೆ ಇಷ್ಟ ಮೊತ್ತದ ಬಂಗಾರದ ಒಡವೆಗಳನ್ನು ನೀಡುವ ಸಂದರ್ಭದಲ್ಲಿ ಅವರು ಪರಿಚಯಸ್ಥರಿದ್ದ ಕಾರಣ ಭದ್ರತೆಗಾಗಿ ಅವರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಅರ್ಕಸಾಲಿಗ ವೃತಿಯ ಜೊತೆ ವ್ಯವಸಾಯವನ್ನು, ಮನೆ ಮತ್ತು ಅಂಗಡಿಗಳನ್ನು ಬಾಡಿಗೆಗೆ ನೀಡುತ್ತೇನೆ. ನಾನು ಫೈನಾನ್ಸ ವ್ಯವಹಾರ ಮಾಡುವುದಿಲ್ಲ.

3. ಈಗ ತೋರುತ್ತಿರುವ ಫೊಟೋ ಪ್ರಭಾಕರ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ. ಎಂಬ ಹೆಸರಿನಲ್ಲಿ ಸಹಕಾರಿ ಸಂಸ್ಥೆ ಇದ್ದು ಅದು ಹಲವಾರು ವ್ಯಕ್ತಿಗಳ ಹೆಸರಿನಲ್ಲಿರುತ್ತದೆ. ಆ ಫೊಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ಸಹಕಾರಿ ಸಂಘಕ್ಕೆ ಒಟ್ಟು 15 ಮಂದಿ ನಿರ್ದೇಶಕರಿದ್ದು 800 ಜನ ಸದಸ್ಯರಿದ್ದಾರೆ. ಆ ನಿರ್ದೇಶಕರ ಪೈಕಿ ನಮ್ಮ ಮನೆಯಿಂದ ನಾನು ಮತ್ತು ನನ್ನ ಹೆಂಡತಿ ಮಾತ್ರ ನಿರ್ದೇಶಕರಿದ್ದು ಉಳಿದ ನಿರ್ದೇಶಕರು ಬೇರೆ ಬೇರೆ ವ್ಯಕ್ತಿಗಳಾಗಿರುತ್ತಾರೆ. ಆ ಸಹಕಾರಿ ಸಂಘದಲ್ಲಿ ನಾನೇ

ಮುಂದಾಳತ್ವ ವಹಿಸದ ಕಾರಣ ನನ್ನ ಹೆಸರಿನಲ್ಲಿ ಸ್ಥಾಪಿಸಲಾಗಿರುತ್ತದೆ. ನಾವು ಸಾಲ ಕೊಡುವ ಸಂದರ್ಭದಲ್ಲಿ ಆ ಸಂಘಕ್ಕೆ ಷೇರು ಸದಸ್ಯತ್ವ ಪಡೆದುಕೊಂಡ ನಂತರ ಸಾಲವನ್ನು ಮಂಜೂರು ಮಾಡುತ್ತೇವೆ.

**4.** ಆರೋಪಿಯ ಗಂಡ ವ್ಯವಸಾಯ ಮಾಡುತ್ತಾರೆ. ಅವರಿಗೆ ಅಡಿಕೆ ತೋಟ ಸಹ ಇದೆ. ಆರೋಪಿಯ ಗಂಡ ಬೇರೆಯವರಿಗೆ ಸಂಬಂಧಪಟ್ಟ ಅಡಿಕೆಯನ್ನು ಖರೀದಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ಬೇರೆಯವರಿಂದ ಅಡಿಕೆಯನ್ನು ಖರೀದಿಸಿ ಹಣ ಕೊಡುವವರೆಗೆ ತನ್ನ ಚೆಕ್ಕನು ಅವರಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ಕುಪಗಡ್ಡಿ ಗ್ರಾಮದ ಆನಂದ ಎಂಬುವವರಿಂದ ಅಡಿಕೆ ಖರೀದಿಸಿದ ಹಣಕ್ಕೆ ಆರೋಪಿಗೆ ಸೇರಿದ ಎರಡು ಚೆಕ್ಕನ್ನು ನೀಡಿದ್ದರು ಎಂದರೆ ಸರಿಯಲ್ಲ. ಆನಂದ ಇವರು ನಮ್ಮ ಪ್ರಭಾಕರ ಸಹಕಾರ ಸೌಹಾರ್ದ ಸೊಟಿಯಲ್ಲಿ ಸಾಲ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಆರೋಪಿಗೆ ಸಂಬಂಧಿಸಿದ ಎರಡು ಚೆಕ್ಕಗಳನ್ನು ಪಡೆದುಕೊಂಡು ಆನಂದರವರಿಗೆ ಸಾಲ ನೀಡಿದ್ದೇವು ಎಂದರೆ ಸರಿಯಲ್ಲ.

**5.** ಆನಂದರವರಿಗೆ ನಾನು ನಮ್ಮ ಸೊಟಿಯಿ ವತಿಯಿಂದ ಸಾಲ ನೀಡದೇ ಆನಂದ ರವರಿಂದ ಆರೋಪಿಯ ಚೆಕ್ಕನ್ನು ಪಡೆದುಕೊಂಡು ನಾನು ವೈಯಕ್ತಿಕವಾಗಿ ಆತನಿಗೆ ಸಾಲ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಾಲವನ್ನು ಆನಂದ ಮರುಪಾವತಿ ಮಾಡಿದ್ದರೂ ಸಹ ಆತನಿಂದ ಪಡೆದ ಆರೋಪಿಯ ಚೆಕ್ಕಗಳನ್ನು ಆತನಿಗೆ ವಾಪಸ್ಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾನು ಆರೋಪಿಯ ಚೆಕ್ಕಗಳನ್ನು ಬ್ಯಾಂಕಗೆ ಹಾಜರು ಪಡಿಸಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನನಗೆ ಎಂದೂ ಸಹ ಪರಿಚಯಸ್ಥ ಎಂದರೆ ಸರಿಯಲ್ಲ. ಆರೋಪಿ ನಮ್ಮ ಅಂಗಡಿಯಲ್ಲಿಲ್ ಬಂಗಾರವನ್ನು ಖರೀದಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಚೆಕ್ಕ ನಂಬರ ನನಗೆ ಗೊತ್ತಿರುವುದಿಲ್ಲ. ಆ ಚೆಕ್ಕ ಮೇಲೆ ಬರವಣಿಗೆಯನ್ನು ಆರೋಪಿಯೇ ಬೆರೆದುಕೊಂಡು ಬಂದು ಕೊಟ್ಟರು. ನಮ್ಮ ವಕೀಲರ ಮೂಲಕ ನೀಡಲಾದ ನೋಟಿಸು ಆರೋಪಿಗೆ ಮುಟ್ಟಿರುತ್ತದೆ. ನಾನು ಅಂಚೆ ಇಲಾಖೆಯವರೆ ಜೊತೆ ಮೀಲಾಪೆಯಾಗಿ ಆ ನೋಟಿಸು ಆರೋಪಿಗೆ ಮುಟ್ಟದೇ ಇದ್ದರೂ ಸಹ ಮುಟ್ಟಿದೆ ಎಂದು ಸುಳ್ಳು ವರದಿಯನ್ನು ನೀಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಸಹಿಯನ್ನು ರಾಜೇಶ್ವರಿಗೌಡ ಎಂದು ಬರೆಯುತ್ತಾರೆ. ಆ

ಚೆಕ್ಕಿನ ಮೇಲೆ ಸಹಿಯನ್ನು ಆರೋಪಿ ನನ್ನ ಎದುರು ಮಾಡಿರುವುದಿಲ್ಲ. ಆ ದಿನ ಆರೋಪಿ ಚೆಕ್ಕನ್ನು ಬರೆದುಕೊಂಡು ಬಂದು ಸಹಿ ಮಾಡಿ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**6.** ನನಗೂ ಆರೋಪಿಗೂ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಊರಿಗೆ ಹೋಗಿ ಬಾಕಿ ಹಣವನ್ನು ಕೊಡುವಂತೆ ಕೇಳಿಕೊಂಡಿರುತ್ತೇನೆ. ನಾನು ಮತ್ತು ನಮ್ಮ ಹುಡುಗ ಆರೋಪಿಯ ಮನೆಯ ಬಳಿ ಹೋದಾಗ ಆರೋಪಿ ಒಬ್ಬರೇ ಮನೆಯಲ್ಲಿ ಇದ್ದರು. ಆರೋಪಿ ಜೂನ್ 2024 ನೇ ಸಾಲಿನಂದು ಚೆಕ್ಕ ಕೊಟ್ಟರು ಆದರೆ ದಿನಾಂಕ ಈಗ ನೆನಪಿಲ್ಲ. ನಾನು ಚೆಕ್ಕನ್ನು ನಗದೀಕರಣಕ್ಕಾಗಿ ಜೂನ್ ತಿಂಗಳಿನಲ್ಲಿ ಹಾಜರು ಪಡಿಸಿರುತ್ತೇನೆ. ಬ್ಯಾಂಕನವರು ನಾನು ಹಾಜರು ಪಡಿಸಿದ 2-3 ದಿನಗಳ ನಂತರ ಹಿಂಬರವನ್ನು ನೀಡಿರುತ್ತಾರೆ. ಕಾನೂನು ಬದ್ಧ ನೋಟಿಸಿಗೆ ನಾನೇ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ಆರೋಪಿಯ ಚೆಕ್ಕನ್ನು ಆನಂದರವರಿಂದ ಪಡೆದುಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗದೇ ಇರುವ ಕಾರಣ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

:ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್